ನೋಡಿ ಮುಗುಳುನಕ್ಕಂತಾಯಿತು. ತಕ್ಷಣ ನಿಂಗಪ್ಪಜ್ಜನ ನೆನಪಾಗಿ ಅತ್ತ ನೋಡಿದ್ರ ಅವ ಗುಡಿಕಡೆ ಬೆನ್ನು ಮಾಡಿ ಮಲಗಿದ್ದ. ಸದ್ಯ ಅವನಿಗೆ ಕೇಳಿಸಲಿಲ್ಲ ಎಂದುಕೊಂಡು ಹೊರಗೆ ಓಡಿ ಬರುತ್ತಿದ್ದವನಿಗೆ ಚಿಲ್ರೆಗಳ ನೆನಪಾಗಿ ಗೋಬಿ ನೆನಪಿಗೆ ಬಂದು ಮತ್ತೆ ಗುಡಿಯೊಳಕ್ಕೆ ಹೋದ. ಅಲ್ಲಿದ್ದ ಚಿಲ್ರೆಗಳನ್ನೆಲ್ಲಾ ತನ್ನ ಬಕ್ಕಣಕ್ಕ ಸುರುವಿಕೊಂಡು ಮರಳಿ ಬರುವಾಗ ಮತ್ತೊಮ್ಮೆ ಗಂಟೆ ಹೊಡಿಬೇಕನಿಸಿತು. ಹಾರಿ ಜಿಗಿದು 'ಢಣ್' ಅಂತ ಮತ್ತೊಮ್ಮೆ ಬಾರಿಸಿ ಸಾಲಿಕಡೆ ಓಡಿ ಹೋಗ್ತಿರಬೇಕಾದ್ರ ಈ ಸರ್ತಿ ಗಂಟೆಯ ಸದ್ದು ನಿಂಗಪ್ಪಜ್ಜನ ಕಿವಿ ಹೊಕ್ಕು ಅವನನ್ನು ಕೆರಳಿಸಿ ಎದ್ದು ಕೂಡುವ ಹಾಗೆ ಮಾಡಿಬಿಟ್ಟಿತು. ತನ್ನ ಮುಂದೆಯೆ ಓಡಿ ಹೋದ ಭರ್ಮನ ಬಗ್ಗೆ ನಿಂಗಪ್ಪಜ್ಜಗ ಸಂಶಯ ಮೂಡಿ ಅವನು ಊರಾಗಿನ ಹುಡುಗ ಅನಿಸದೆ ಕೇರಿಯವನಿರಬೇಕೆಂದು ದೌಡು ಬಂದು ಅವನನ್ನೇ ಹಿಂಬಾಲಿಸಿದ.

ನಿಂಗಪ್ಪಜ್ಜನ ಕೈಕಾಲು ತಣ್ಣಗಾಗಿದ್ವು. ಕೇರಿಯ ಹುಡುಗ ಗುಡಿಗೆ ಬಂದು ಗಂಟೆ ಹೊಡೆಯೊದಂದ್ರೇನು? ತನಗ ಮಣ್ ಸೇರೋ ವಯಸ್ಸಾಗಿದ್ರೂ ಇಲ್ಲಿಮಟ ಇಂತಹ ಘಟನೆಯನ್ನ ಕೇಳಿರಲಿಲ್ಲ, ಕಂಡಿರಲಿಲ್ಲ. ಅವನ ಎದಿಯಾಗ ದಿಗಿಲಾತು. ಅವನು ಕೇರಿಯವನೋ ಊರಿನವನೋ? ಗೊಂದಲದಲ್ಲಿಯೇ ನಿಂಗಪ್ಪಜ್ಜ ಸಾಲಿತನಕ ಹೋಗಿ ಅವನನ್ನು ಹುಡುಕಿದ. ಭರ್ಮ ತನ್ನ ಕ್ಲಾಸಿನೊಳಗ ಕೋಳಿಯಂಗ ಮುದುಡಿ ಕುಳಿತಿದ್ದು ಕಂಡಿತು. ತಾನಿರುವಲ್ಲಿಯವರೆಗೂ ಬಂದ ನಿಂಗಪ್ಪಜ್ಜನನ್ನು ಕಂಡ ಭರ್ಮ ಥರಗುಟ್ಟತೊಡಗಿದ. ಗಂಟೆ ಬಾರಿಸಿದ ಹುಡುಗ ಕೇರಿಯವನಾದ ಹೊಟ್ಟಿ ಭರ್ಮನೇ ಎಂದು ಅವನ ಹೊಟ್ಟಿ ನೋಡಿ ದೃಢಪಡಿಸಿಕೊಂಡ ನಿಂಗಪ್ಪಜ್ಜ, ಬಸಪ್ಪ ಮಾಸ್ತಾರನನ್ನು ಜೋರಾಗಿ ಕೂಗುತ್ತಾ ಹೊರಬಂದ.

* * *

ಊರಾನ ಮಂದಿ ಪಂಚಾಯ್ತಿ ಸೇರದ್ರೊಳಗ ಮಧ್ಯಾಹ್ನ ಮೀರಿ ಹೋಗಿತ್ತು. ಊರಿನ ಎಲ್ಲಾ ಮುಖ್ಯಸ್ಥರೂ, ನಿಂಗಪ್ಪಜ್ಜನೂ, ಚಹಾದಂಗಡಿಯ ಸಿದ್ಧನೂ, ಅವನ ಪ್ರಿಯ ಹೆಂಡತಿಯೂ, ಬಸಪ್ಪ ಮಾಸ್ತಾರನೂ ಮುಂದಿನ ಸಾಲಿನ್ಯಾಗ ಕುಂತಿದ್ರು. ಇನ್ನೊಂದು ಬದಿಗೆ ಕೇರಿಯ ಮುಖಂಡರಾದ ಗಾಳೆಪ್ಪ, ಸುಂಕಜ್ಜ, ರುದ್ರಣ್ಣ ಮತ್ತಿತರರು ಕೈಕಟ್ಕೊಂಡು ನಿಂತಿದ್ರ, ಒಂದು ಮೂಲ್ಯಾಗ ಮೈಲೆಪ್ಪನೂ ಮಾದೇವಿಯೂ ಥರ ಥರ ನಡುಗಕತ್ತಿದ್ರು. ಮಾದೇವಿಯ ಹಿಂದೆ ನಿಂತಿದ್ದ ಭರ್ಮ ಅವಳ ಸೀರೆಯನ್ನು ಗಟ್ಟಿಯಾಗಿ ಹಿಡ್ಕೊಂಡು ಅಳು ಮಾರಿ ಮಾಡ್ಕೊಂಡಿದ್ದ. ಹೆದರಿಕೊಂಡಿದ್ದ ಭರ್ಮ, ಅರ್ಧ ತಾಸಿನಿಂದಾನೂ 'ತಾನು ಗುಡಿ ಹೊಕ್ಕಿಲ್ಲ, ಗಂಟೆ ಬಾರಿಸಿಲ್ಲ' ಅಂತ ವಾದ ಮಾಡುತ್ತಲೇ ಇದ್ದ.

ಮಾದರ ರುದ್ರಣ್ಣ ಬೇವಿನ ಗಿಡದ ಹಸಿ ಕಟಿಗಿ ಮುರಕೊಂಡು ಬಂದು ಬೆನ್ನಿಗೆ, ಕಾಲಿನ ಮೀನ ಖಂಡಗಳಿಗೆ ರಪ್ ರಪ್ ಅಂತ ಬಡಿಯತೊಡಗಿದಾಗ, ಭರ್ಮ ಜೀವ ಹೋದವನ ಹಾಗೆ ಲಬ್ ಲಬ್ ಹೊಯ್ಕೊಂತ ಜೋರಾಗಿ ಅಳತೊಡಗಿದ. ಮಗ ಅಳ್ತಿರೋದು ನೋಡೋಕಾಗ್ದೆ ಅವನಿಗೆ ಬೀಳುತ್ತಿದ್ದ ಏಟುಗಳಿಗೆ ಇವಳ ಕಳ್ ಕಿತ್ತು ಬಂದಂಗಾಗಿ ಮಾದೇವಿ ಮಗನನ್ನು ಗಟ್ಟಿಯಾಗಿ ತಬ್ಬಿಕೊಂಡು ಕುಳಿತಳು. ಭರ್ಮನಿಗೆ ಬೀಳ್ತಿದ್ದ ಒಂದೆರೆಡು ಏಟು ತಪ್ಪಿ ಅವಳ ಬೆನ್ನಿಗೂ ಬಿದ್ದು ಕೆಂಪಗ ಬಾರ್ ಮೂಡಾಕತ್ತಿದ್ವು.

ರುದ್ರಣ್ಣ ಬಡಿಯೋದು ನಿಲ್ಸಿ 'ನಿನ್ನಿಂದ ನಮ್ ಕೇರಿಗೂ ಕೆಟ್ಟ ಹೆಸರು ಬಂತೊ ಹಲ್ಕಟ್ ಸೂಳಿಮಗನ, ಗುಡ್ಯಾಗ ಕಾಲಿಟ್ಟಿದ್ದು ಒಪ್ಕೊಳ್ತಿಯೋ ಇಲ್ಲ ಇನ್ನೊಂದ್ ನಾಕ್ ಬಾರಿಸ್ಲಾ' ಅಂತಂದು ಗದರಿಸಿದ. ಹಸಿ ಬೇವಿನ ಕಟಿಗಿ ಏಟು ಮೈಯಾನ ರಕ್ತಾನೆ ಕಿತ್ಕೊಂಡ್ ಬಂದಂಗಿತ್ತು. ಇನ್ನು ಅದರ ನೋವು ಸಹಿಸಿಕೊಳ್ಳಾಕ ಆಗದ ಅವ್ವನ ಸೀರಿ ಸೆರಗಿನೊಳಗೆ ಮುಖ ಹುದುಗಿಸಿದ್ದ ಭರ್ಮ, ಬ್ಯಾರೆ ದಾರಿ ಕಾಣದ ಗುಡ್ಯಾಗ ಕಾಲಿಟದ್ದೂ ಗಂಟಿ ಬಾರಿಸಿದ್ದೂ ಒಪ್ಪಿಕೊಂಡ. ಅವನ ಮೂಗಿನಿಂದ ಸಿಂಬಳ ಬುಳು ಬುಳು ಇಳಿಯತೊಡಗಿತು.

ಈಗ ಊರಿನ ಮುಖ್ಯಸ್ಥರು ಹೌಹಾರಿ ಏನೇನೋ ಗುಸುಗುಸು ಮಾತಾಡಾಕ ಶುರು ಮಾಡಾಕತ್ತಿದ್ರು. ಕೇರಿಯವರು ತಮ್ಮೊಳಗ ಚರ್ಚೆನೂ ಸುರು ಹಚ್ಕೊಂಡ್ರು. ಭರ್ಮ ಮಾತ್ರ ಅಲ್ಲಿ ನಡೆಯುತ್ತಿದ್ದ ಯಾವುದೂ ತನಗೆ ಅರ್ಥವಾಗದವನಂತೆ ಅಳುತ್ತಲೇ ಇದ್ದ.

ನೆಟ್ಟಗ ಸಾಲಿಗೆ ಹೋಗಿ ಬರಾದಬಿಟ್ಟು ಇಲ್ಲದ ಉಸಾಬರಿ ಮಾಡಿದ್ದಕ್ಕ ಮೈಲೆಪ್ಪ ಮಗನಿಗೆ ಬಾಯಿಗೆ ಬಂದಂಗ ಬಯ್ಯಾಕತ್ತಿದ್ದ. ತಮಗ ಇನ್ನೇನು ಗತಿ ಕಾದೈತೋ ಅಂತ ತಲಿ ತಲಿ ಬಡ್ಕೊಂಡು ಕುಂತ. ಮಾದೇವಿ ಮಾತ್ರ ಭರ್ಮನನ್ನು ತಬ್ಬಿಕೊಂಡು ಅವನಿಗೆ ಬಿದ್ದ ಏಟುಗಳನ್ನು ನೋಡಿ ದುಃಖಿಸತೊಡಗಿದ್ದಳು.